<u>ದಿನಾಂಕಃ 13-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- 3 ನೇ ಎದುರುದಾರರ ಪರ ವಕೀಲರಿಂದಃ-</u>

ದಿಃ04.03.2024 ರಂದು ಮಧ್ಯಾಹ್ನಃ12.00 ರಿಂದ 01.00 ಗಂಟೆಯ ಒಳಗೆ ಅಪಘಾತವಾಗಿರುತ್ತದೆ. ಅಪಘಾತದ ಸಮಯ ಬೈಕ್ ಅನ್ನು ನಾನೇ ಚಲಾಯಿಸಿರುತ್ತೇನೆ. ನಾನು ನನ್ನ ಚಾಲನಾ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ಟ್ರ್ಯಾಕ್ಟರ್ ನಿಂದ ಅಪಘಾತವಾಗಿರುತ್ತದೆ. ಸದರಿ ಟ್ರ್ಯಾಕ್ಟರ್ ನಂ.9387 ಇರುತ್ತದೆ. ಸದರಿ ದಿನ ನಾನು ಚಿಕ್ಕಮಗಳೂರಿನಿಂದ ಬೀರನಹಳ್ಳಿಗೆ ಹೋಗುತ್ತಿದ್ದೆನು. ನನ್ನ ಜೊತೆಗೆ ನನ್ನ ಅಣ್ಣ ಇದ್ದರು. ಸದರಿ ದಿನ ಟ್ರ್ಯಾಕ್ಟರ್ ನನ್ನ ಮೊಟಾರ್ ಸೈಕಲ್ ಗೆ ಸೈಡ್ ನಲ್ಲಿ ಡಿಕ್ಕಿಪಡಿಸಿ ಅಪಘಾತ ಮಾಡಿರುತ್ತದೆ.

ಅಪಘಾತವಾದ ನಂತರ ಮೊದಲು ನಾನು ಹೋಲಿ ಕ್ರಾಸ್ ಆಸ್ಪತ್ರೆಗೆ ಹೋಗಿರುತ್ತೇನೆ. ವೈದ್ಯರ ಬಗ್ಗೆ ನನಗೆ ಆದ ಗಾಯದ ಬಗ್ಗೆ ಹೇಳಿ ಬರೆಸಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಹೋಲಿ ಕ್ರಾಸ್ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ದಾಖಲಾಗಿರುತ್ತೇನೆ. ಸುಮಾರು 7 ರಿಂದ 8 ದಿನ ಒಳರೋಗಿಯಾಗಿ ದಾಖಲಾಗಿರುತ್ತೇನೆ. ನಾನು ಅಪಘಾತವಾದ ದಿನದಿಂದ 6 ರಿಂದ 7 ದಿನ ದಾಖಲಾಗಿದ್ದೆನು. ಸದರಿ ಆಸ್ಪತ್ರೆ ಹೊರತುಪಡಿಸಿ ಬೇರೆ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದಿರುವುದಿಲ್ಲ. ನನ್ನ ಎಡಕೈಗೆ ಹಾಗೂ ಕಾಲಿಗೆ ಗಾಯಗಳು ಆಗಿರುತ್ತದೆ. ನನಗೆ ಆಪರೇಷನ್ ಮಾಡಿರುವುದಿಲ್ಲ. ನನಗೆ ಸಣ್ಣಪುಟ್ಟ

ಗಾಯಗಳು ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗೆ 3 ಲಕ್ಷದಷ್ಟು ಖರ್ಚು ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಳಿಯ ಅಪಘಾತದ ಬಗ್ಗೆ ದೂರನ್ನು ನೀಡಿರುತ್ತಾರೆ. ಅಪಘಾತದ ಸಮಯದಲ್ಲಿ ಆತನು ನನ್ನ ಜೊತೆ ಇರಲಿಲ್ಲ ಎಂದರೆ ಸರಿ. ಒಂದು ದಿನ ತಡವಾಗಿ ದೂರನ್ನು ನೀಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿದ್ದರಿಂದ ಒಂದು ದಿನ ತಡವಾಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನನಗೆ 46 – 47 ವರ್ಷ ವಯಸ್ಸು ಆಗಿತ್ತು. ಅಪಘಾತ ಸಮಯದಲ್ಲಿ ನನಗೆ 50 ಕ್ಕಿಂತ ಹೆಚ್ಚು ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಸದರಿ ಅಪಘಾತ ಸಮಯದಲ್ಲಿ ಎದುರುದಾರ ವಾಹನಕ್ಕೆ ವಿಮೆ ಚಾಲ್ತಿಯಲ್ಲಿ ಇಲ್ಲದೇ ಇದ್ದುದರಿಂದ 3 ನೇ ಎದುರುದಾರರು ಪರಿಹಾರವನ್ನು ನೀಡಲು ಭಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ಟ್ರ್ಯಾಕ್ಟರ್ ಚಾಲಕನಿಗೂ ಚಾಲನಾ ಪತ್ರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 3 ನೇ ಎದುರುದಾರರು ಪರಿಹಾರ ನೀಡಲು ಭಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ- 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದಃ-

(ಪಾಟೀ ಸವಾಲಿಗೆ 1 ಮತ್ತು 2 ನೇ ಎದುರುದಾರ ಪರ ವಕೀಲರು ಕಾಲಾವಕಾಶ ಕೋರಿದ್ದು ಸಾಕ್ಷಿದಾರರಿಗೆ ರೂ.500/- ನ್ನು ನೀಡುವ ಆದೇಶದ ಮೇರೆಗೆ ಕಾಲಾವಕಾಶ ನೀಡಿದೆ).

ಎಂ.ವಿ.ಸಿ ನಂ.271/2024
ಪಿ.ಡಬ್ಲ್ಯೂ: 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್:

ಎಂ.ವಿ.ಸಿ ನಂ.271/2024
ಪಿ.ಡಬ್ಲ್ಯೂಃ 1